# ಮಾನಸ ಗಂಗೋತ್ರಿ

ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

ಸಂಚಿಕೆ: ೪೧ ಸಂಪುಟ:೧೫ ದಿನಾಂಕ:೩೦/೧೧/೨೦೧೧ ಸ್ಥಳ:ಮೈಸೂರು



ಕನ್ನಡಕ್ಕಾಗಿ ಹಂಬಲಿಸಿದ ವಿದೇಶಿ ಜೀವ


ಪುಟ:2





ಬಹುಮುಖ ಪ್ರತಿಭೆ ರಾಗೌ:ಮಲ್ಲೇಪುರಂ

ಪುಟ:3





ಪೂರ್ಣ ಬದುಕು ಹಂಚಿಕೊಂಡ ನನ್ನ ತೇಜಸ್ವಿ

ಪುಟ:4

## ಅಂಚೆ ತೆರಪಿನ ಶಿಕ್ಷಣ ಪುನರಾರಂಭ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಅಂಚೆ ಮತ್ತು ತೆರಪಿನ ಶಿಕ್ಷಣ ಪುನರಾರಂಭಿಸಲು ತೀರ್ಮಾನಿಸಲಾಗಿದೆ.

ಕ್ರಾಫರ್ಡ್ ಭವನದಲ್ಲಿ ಮಂಗಳವಾರ ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು. ಕರ್ನಾಟಕ ರಾಜ್ಯ ಮುಕ್ತ ವಿವಿ ಆರಂಭವಾದ ಬಳಿಕ ಸಾಂಪ್ರದಾಯಿಕ ವಿವಿಯಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಆರಂಭಿಸಬಾರದು ಎಂದು ಕುಲಾಧಿಪತಿ ಆದೇಶಿಸಿದ್ದರು. ಆದ-ರೆ, ದೂರ ಶಿಕ್ಷಣವೇ ಬೇರೆ ಹಾಗೂ ಅಂಚೆ ಮತ್ತು ತೆರಪಿನ ಶಿಕ್ಷಣವೇ ಬೇರೆ ಎಂಬ ವಾದದ ಹಿನ್ನೆಲೆಯಲ್ಲಿ ವಿವಿ ಧನ ಸಹಾಯ ಆಯೋಗ(ಯುಜಿಸಿ) ಮತ್ತು ದೂರ ಶಿಕ್ಷಣ ಸಾಂಪ್ರದಾಯಿಕ ವಿವಿಗಳಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಆರಂಭಿಸಲು ನಿರ್ಧರಿಸಿದೆ ಎಂದು ಕುಲಪತಿ ಪ್ರೊ ॥ವಿ.ಜಿ.ತಳವಾರ್ ತಿಳಿಸಿದ್ದಾರೆ.

## ಕಂಬಾರರ ದೇಸಿ ಸಾಹಿತ್ಯ ಇಂದಿಗೂ ಪ್ರಸ್ತುತ : ಡಾ॥ಕೆ.

ಕಂಬಾರರ ಕಾವ್ಯ, ನಾಟಕ, ಕಾದಂಬರಿ ಎಲ್ಲವೂ ಗ್ರಾಮ ಕೇಂದ್ರಿತವಾದವು ಅವರ ಎಲ್ಲಾಸೃಜನ ಶೀಲತೆಯು ಗ್ರಾಮ ಜೀವನಕ್ಕೆ ಹತ್ತಿರ ವಾದದ್ದು ಹಾಗೂ ದೇಸಿಯ ಪರಂಪರೆಯ ಮೂಲ ಬೇರುಗಳಲ್ಲಿ ಅವರ ಕಾವ್ಯಗಳು ನೆಲೆಸಿವೆ ಹಾಗಾಗಿ ಕಂಬಾರರು ದೇಶಿಯ ಸಾಹಿತ್ಯ ಪರಂಪರೆಯ ಅತ್ಯುನ್ನತ ಶಿಖರ ಎಂದು ಸಾಹಿತಿ ಡಾ॥ ಕೆ.ಮರಳಸಿದ್ದಪ್ಪ ಅಭಿಪ್ರಾಯಪಟ್ಟರು.

ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಸಂಶೋಧನ ವಿದ್ಯಾರ್ಥಿ ವೇದಿಕೆಯು ಏರ್ಪಟಿಸಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ॥ ಚಂದ್ರಶೇಖರ ಕಂಬಾರರ ಸಾಹಿತ್ಯ ಕುರಿತ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಹಾಗೂ ಗಂಗೋತ್ರಿ ಕವಿಗೋಷ್ಠಿಯ ಎರಡು ದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಕವಿ ಕುವೆಂಪು ನಂತರ ಬೇಂದ್ರೆ ಹಾಗೂ ಇತ್ತೀಚಿನ ಕವಿ ಕಂಬಾರರು ಈ ಮೂವರು ಶೈಕ್ಷಣಿಕ ವಲಯದಲ್ಲಿ ಕನ್ನಡ ಪ್ರಾಧ್ಯಾಪಕರು ಎಂಬುದು ವಿಶೇಷ ಸಾವಿರ ವರ್ಷದ ಕನ್ನಡ





ಚಿತ್ರ:ಸ್ವಾಮಿ.ಕೆ.ವಿ

ವಿಚಾರ ಸಂಕೀರಣವನ್ನು ದೀಪ ಬೆಳಗುವುದರ ಮೂಲಕ ಡಾ॥ ಕೆ ಮರಳಸಿದ್ದಪ್ಪ ಉದ್ಘಾಟಿಸುತ್ತಿರುವುದು ವಿವಿ ಕುಲಪತಿ ಪ್ರೊ॥ ವಿ.ಜಿ.ತಳವಾರ್ ಹಾಗೂ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ॥ಗಂಗಾನಾಯಕ್

ಸಾಹಿತ್ಯವನ್ನು ಓದಿ ಅಧ್ಯಯನಮಾಡಿ ಸಂಬಂಧಿಸಿದ ಸಾಹಿತ್ಯವನ್ನು ರಚಿಸಿರುವ ಕುವೆಂಪು ಹಾಗೂ ಕಂಬಾರರು ಕನ್ನಡ ಸ್ನಾತಕೋತ್ತರ ಕೆಲಸಗಳನ್ನು ಹೆಚ್ಚಾಗಿ ಮಾಡಿದವರು,ಇಬ್ಬರೂ ಕುಲಪತಿಗಳಾಗಿ ವಿವಿಗಳನ್ನು ಕಟ್ಟಿ ಬೆಳಸಿದವರು ಹೀಗಾಗಿ ಈ ಇಬ್ಬರು ಮಹಾ ಕವಿಗಳಿಗೆ ಹೋಲಿಕೆ ಇದೆ ಎಂದರು. ಕಂಬಾರರ ನಾಟಕಗಳ ಸಂಭಾಷಣೆ ವಸ್ತುನಿಷ್ಠತೆ, ತೇಜಸ್ಸು, ವರ್ಣರಂಜಿತ ಬರವಣಿಗೆ ಶೈಲಿ ಬೇರಾವ ನಾಟಕರಾರಿಗೂ ಇಲ್ಲ ಅವರ ಸಾಹಿತ್ಯ ಅದ್ಭುತವಾದದ್ದು, ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ಅವರ ನಾಟಕ, ಕಾವ್ಯದ ಪ್ರಮುಖ ವಿಷಯ ಕನ್ನಡ ಭಾಷೆ ಅದರಲ್ಲೂ ಉತ್ತರ ಕರ್ನಾಟಕ ಭಾಷೆಗೆ ತೇಜಸ್ಸು ತಂದುಕೊಟ್ಟ ಮಹಾಕವಿ ಕಂಬಾರರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿವಿ ಕುಲಪತಿ ಪ್ರೊ॥ ವಿ.ಜಿ.ತಳವಾರ್ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಜ್ಞಾನಪೀಠ ಪುರಸ್ಕೃತರಾದ ಡಾ॥ಚಂದ್ರಶೇಖರ ಕಂಬಾರರನ್ನು ಆಹ್ವಾನಿಸಿ ಬಹುದೊಡ್ಡ ವಿಚಾರಸಂಕಿರಣ ಏರ್ಪಡಿಸುವ ಉದ್ದೇಶವಿದೆ, ಇಂತಹ ವಿಚಾರ ಸಂಕಿರಣದಿಂದ ವ್ಯಕ್ತವಾಗುವ ಸಾಹಿತ್ಯದರ್ಶನ ಹಾಗೂ ಚರ್ಚೆಗಳು ಕೃತಿಯ ರೂಪಕ್ಕೆ ಬರಲಿ ಎಂದು ಅವರು ಆಶಿಸಿದರು.ನಂತರ ಪ್ರೊ॥ ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಗೋಷ್ಠಿಯಲ್ಲಿ ಕಂಬಾರರ ಕಾದಂಬರಿಗಳ ಕುರಿತು ಡಾ॥ಎನ್.ಕೆ.ಲೋಲಾಕ್ಷಿ, ಕಂಬಾರರ ಕಾವ್ಯ ಕುರಿತು ಡಾ॥ ಸಿದ್ದರ್ಥಾ, ಕಂಬಾರರ ಕಾವ್ಯದ ಭಾಷೆ ಕುರಿತು ಡಾ॥ ಮ ರಾಮಕೃಷ್ಣ ವಿಷಯ ಮಂಡಿಸಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ॥ಕೆ.ಎನ್. ಗಂಗಾನಾಯಕ್ ಸ್ವಾಗತಿಸಿದರು ಕಾರ್ಯಕ್ರಮದ ಸಂಚಾಲಕರಾದ ಡಾ॥ ನಂಜಯ್ಯ ಹೊಂಗನೂರು ಡಾ॥ವಾಸುದೇವ ಮೂರ್ತಿ ಉಪಸ್ಥಿತರಿದ್ದರು.

ಸ್ವಾಮಿ.ಕೆ.ವಿ

## ಉದ್ಯಮೀಕರಣಗೊಂಡ ಶಿಕ್ಷಣ ಕ್ಷೇತ್ರ: ಬರಗೂರು ವಿಷಾದ

ಇಂದು ಪ್ರತಿಂಯೊಂದು ಕ್ಷೇತ್ರವೂ ಉದ್ಯಮವಾಗಿದೆ ದೇಶಕ್ಕೆ ಬರುತ್ತಿರುವ ಬಂಡವಾಳ ಭಕ್ತನಾಗಿ ಬರದೆ ಭಗವಂತನಾಗಿ ಬರುತ್ತಿದೆ, ಇದರಿಂದ ಬಂಡವಾಳಗಾರರು ಹೇಳಿದಂತೆ ಭಕ್ತಜನರು ಕೇಳಬೇಕಾಗಿದೆ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ವಿಷಾದಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿಯ ಮಾನಸಗಂಗೋತ್ರಿಯಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜೋತ್ಸವ ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿ ಮಾತನಾಡಿದ ಅವರು. ಸಾಮಾಜಿಕ,ಆರ್ಥಿಕ ಬದಲಾವಣೆಯಿಂದ ಇಂಗ್ಲಿಷ್ ಸ್ಪರ್ಶ ಪಡೆದಿವೆ ಒಂದು ಭಾಷೆ ಬೆಳೆಯಬೇಕಾದರೆ ಬೇರೆ ಭಾಷೆಗಳ ಕೊಡುಕೊಳ್ಳುವಿಕೆ ಅಗತ್ಯ ಆದರೆ ಇಂಗ್ಲಿಷ್ ಭಾಷೆ ಹುಸಿ ಪ್ರತಿಷ್ಠೆಗಳನ್ನು ಬೆಳೆಸುತ್ತಾ ಹೋದರೆ ಕನ್ನಡದ ಗತಿಯೇನು? ಹಳ್ಳಿಗಾಡಿನಲ್ಲಿ ಕನ್ನಡ ಉಳಿದು ಕೊಂಡಿದೆ ಕನ್ನಡದ ಉಳಿವಾಗಬೇಕಾದರೆ ಕನ್ನಡದ ನಾಲಿಗೆ, ಮನಸ್ಸುಗಳಿಗೆ ಶಕ್ತಿಕೊಡಬೇಕು ಆ ನಿಟ್ಟಿನಲ್ಲಿ ಕನ್ನಡದ ಕೆಲಸ ಸಾಗಬೇಕೆಂದು ಇದೇ ಸಂದರ್ಭದಲ್ಲಿ ಎಚ್ಚರಿಸಿದರು.





ಚಿತ್ರ:ವಿಶ್ವನಾಥ್

ಮುಕ್ತ ವಿವಿಯ ರಾಜೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಾಹಿತಿ ಬರಗೂರು. ಚಿತ್ರದಲ್ಲಿ ವಿವಿಯ ಕುಲಪತಿ ಕೆ.ಎಸ್. ರಂಗಪ್ಪ, ಕುಲಸಚಿವ ಬಿ.ಎಸ್.ವಿಶ್ವನಾಥ್,ವಿಕ್ರಂರಾಜೇ ಅರಸ್ ಮತ್ತು ಟಿ.ಡಿ.ದೇವೇಗೌಡ ಉಪಸ್ಥಿತರಿದ್ದರು.

ಇಂದು ಶಿಕ್ಷಣ ತಜ್ಞರ ಭಾಗವನ್ನು ಶಿಕ್ಷಣೋದ್ಯಮಿಗಳು ಆವರಿಸಿದ್ದಾರೆ. ಪುಸ್ತಕ, ಪತ್ರಿಕೆ, ಸಿನಿಮಾ ಎಲ್ಲವೂ ಉದ್ಯಮಗಳಾಗಿ ಬದಲಾಗುತ್ತಿದೆ, ಭಾಷೆಯ ಬಿಕ್ಕಟ್ಟಿಗೆ ಭಾಷೆಕಾರಣವಲ್ಲ ಬದುಕಿನ ಬಿಕ್ಕಟ್ಟು ಭಾಷೆಂಯು ಬಿಕ್ಕಟ್ಟಾಗುತ್ತದೆ, ಕನ್ನಡದ ಹಲವು ಪದಗಳು

ಕಾರ್ಯಕ್ರಮದಲ್ಲಿ ಕರಾಮುವಿಯು ಕುಲಪತಿ ಕೆ.ಎಸ್.ರಂಗಪ್ಪ, ಕುಲಸಚಿವರಾದ ಬಿ.ಎಸ್.ವಿಶ್ವನಾಥ್, ಡೀನ್ ಶೈಕ್ಷಣಿಕರಾದ ವಿಕ್ರಮರಾಜಅರಸ್ ಹಾಗೂ ಡೀನ್ ಅಧ್ಯಯನ ಕೇಂದ್ರದ ಜಿ.ಟಿ.ದೇವೇಗೌಡ ಉಪಸ್ಥಿತರಿದ್ದರು.

ತೇಜಸ್.ಎಚ್.ಎಸ್

ಕನ್ನಡ ಭಾಷೆ ಒಂದು ಅನನ್ಯ ಮುತ್ತಿದಂತೆ ಕನ್ನಡ ಭಾಷೆಂಯುನ್ನು ಮಾತನಾಡುವಾಗ ಸಿಗುವ ಸಂತೋಷ ಮತ್ತಾವ ಭಾಷೆಯಿಂದಲೂ ಸಿಗದು ನಿಜಕ್ಕೂ ಕನ್ನಡ ಭಾಷೆ ಸುಲಿದ ಬಾಳೆ ಹಣ್ಣಿನಂತಹ ಭಾಷೆ ಎಂದು ಪ್ರಜಾವಾಣಿ ಸ್ಥಾನಿಕ ಸಂಪಾದಕರಾದ ರವೀಂದ್ರಭಟ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ನವೆಂಬರ್ 26 ರಂದು 56ನೇ ವರ್ಷದ ಕನ್ನಡ ರಾಜೋತ್ಸವ ಹಾಗೂ ಸಮೂಹ ಮಾಧ್ಯಮಗಳಿಂದ ಕನ್ನಡ ವಿನಾಶ ಎಂಬ ವಿಷಯದ ಕುರಿತ ವಿಚಾರ ಸಂಕಿರಣ ವನ್ನು ಉದ್ಘಾಟಿಸಿ ಮಾತನಾಡಿದರು.

ಸಮೂಹ ಮಾಧ್ಯಮಗಳಿಂದ ಕನ್ನಡ ಭಾಷೆಯ ವಿನಾಶ ಎಂಬ ಮಾತನ್ನು ಒಪ್ಪಿಕೊಂಡ ಇವರು ಇಂದು ಕನ್ನಡ ಭಾಷೆಯ ವಿನಾಶಕ್ಕೆ ಮುಖ್ಯವಾಗಿ ಎಫ್ ಎಂ ವಾಹಿನಿಗಳು, ಸಿನಿಮಾ ಮತ್ತು ದೂರ ದರ್ಶನಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳೇ ಕಾರಣ



ಸ್ವಾಮಿ.ಕೆ.ವಿ

ಕಾರ್ಯಕ್ರಮವನ್ನು ದೀಪಬೆಳಗುವುದರ ಮೂಲಕ ಉದ್ಘಾಟಿಸುತ್ತಿರುವ ಪ್ರಜಾವಾಣಿ ಮೈಸೂರು ಆವೃತ್ತಿಯ ಸ್ಥಾನಿಕ ಸಂಪಾದಕರಾದ ರವೀಂಧ್ರ ಭಟ್

ಎಂದರು ಎಫ್ ಎಂ ಚಾನಲ್ ಗಳಲ್ಲಿ ಬರುವ ಕೇಳಿ ಕೇಳಿಸಿ ಲೆ ಫ್ ನಿಮ್ಮದಾಗಿಸಿ, ಮಸ್ತ್ ಮಜಾ ಮಾಡಿ, ಸೂರ್ಯಂಗೆ ಟಾರ್ಚ್, ಸರಸ್ವತಿಗೆ ಟ್ಯೂಷನ್‌ನ ಈ ರೀತಿಂಯು ಎಫ್ ಎಂ ಚಾನಲ್‌ಗಳ ಪದದ ಬಳಕೆ ಕನ್ನಡ ಭಾಷೆಯನ್ನು ಅಲ್ಲದೆ ಇಂಗ್ಲಿಷ್ ಭಾಷೆಯನ್ನು ಹಾಳುಮಾಡಿದೆ. ಈ ರೀತಿಯ ಕಾರ್ಯಕ್ರಮವನ್ನು ಕೇಳುವ ನಮ್ಮ ಮಕ್ಕಳು ಮತ್ತೆಷ್ಟು ಕನ್ನಡವನ್ನು ಕಲಿಯತ್ತಾರೆ ಎಂದು ಪ್ರಶ್ನಿಸಿದರು. ಕಾಲೇಜು ಗೇಟಲ್ಲಿ ಫೆಲಾಗಿ ಬಂದೋರ ಕಾಪಾಡೋ ಚೊಂಬೇಶ್ವರ, ಲಾಂಗುಗೀಂಗು ಹಿಡಿಯುಂಗಿಲ್ಲ ಈ ರೀತಿಂಯು ಸಿನಿಮಾ ಹಾಡುಗಳಿಂದ ಭಾಷೆ ಖಂಡಿತ ವಿನಾಶ ವಾಗುತ್ತದೆ ಏಕೆ-ಂದರೆ ಈ ರೀತಿಯ ಹಾಡುಗಳು ಮಕ್ಕಳ ಕಿವಿಯ ಮೇಲೆಬಿದ್ದಾಗ ಅವರ ಸೃಜನಶೀಲತೆಯು ಇದೇ ರೀತಿ ಯಾಗಿರುತ್ತದೆ ಯಾವ ಭಾಷೆಯ ಬಗ್ಗೆಯೂ ತಾತ್ಸಾರ ಮಾಡಬಾರದು ಆದರೆ ಒಂದು ಭಾಷೆಯ ಜೊತೆ ಮತ್ತೊಂದು ಭಾಷೆಂಯುನ್ನು ಬೆರಕೆಮಾಡಿ ಉಪಯೋಗಿಸುವುದು ತುಂಬಾ ಅಪಾಯಕಾರಿ ಒಂದು ಭಾಷೆಯ ಸೌಂದರ್ಯಕ್ಕೆ ಚ್ಯುತಿ ಬಂದ ಹಾಗೆ ಎಂದು ಹೇಳಿದರು. ದೂರ ದರ್ಶನತನ್ನ ಟಿ.ಆರ್.ಪಿ ಯನ್ನು ಹೆಚ್ಚಿಸಿಕೊಳ್ಳಲು ಈ ರೀತಿಯ ಕಾರ್ಯ ಕ್ರಮ ಗಳಿಂದ ಭಾಷೆ ಗೆ ಅವಮಾನ ಮಾಡುತ್ತಿದೆ ಎಂದು ಹೇಳಿ ದರು.

ಯಕ್ಷಗಾನದಲ್ಲಿ ಒಂದು ಇಂಗ್ಲಿಷ್ ಪದವು ಬಳಕೆಯಾಗುವುದಿಲ್ಲ, ಈ ಕಾರ್ಯ ಮಾಧ್ಯಮಗಳೆಲ್ಲೇಕೆ ಸಾಧ್ಯವಿಲ್ಲ, ಭಾಷೆಯ ಸ್ಪಷ್ಟ ಬರಹ, ಉಚ್ಚಾರಣೆ, ಮಾಧ್ಯಮದಿಂದಾಗಬೇಕಿದೆ ಜೊತೆ-ಗೆ ಇಂದು ಜನರಲ್ಲಿ ಓದುವ ಮನೋಭಾವ ಕಡಿಮೆ ಯಾಗಿದೆ ಕೇಳುವುದು, ನೋಡುವುದಕ್ಕಿಂತ ಓದಿದರೆ ಭಾಷೆಂಯು ಬಳಕೆಯಲ್ಲಿ ಸರಿತಪ್ಪು ಯಾವುದೆಂದು ಅರಿಯಬಹುದು, ಇಲ್ಲದಿದ್ದರೆ ಕನ್ನಡ ಭಾಷೆಗೆ ದೊಡ್ಡ ಗಂಡಾಂತರ ಕಾದಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಶಾಸ್ತ್ರ ವಿಭಾಗದ ಅಧ್ಯಕ್ಷರಾದ ಡಾ॥ ಎಸ್. ಯಶೋದ, ಡಾ ಬಿ.ಗುರುರಾಜ್ ಉಪಸ್ಥಿತರಿದ್ದರು.

ಸ್ವಾಮಿ.ಕೆ.ವಿ

